


**ಹೋಗಿ ಬನ್ನಿ ಋತುಗಳೇ**
ನಾಲ್ಕು ದಶಕದ ಕವಿತೆಗಳು
ಲೇ: ಎಚ್.ಎಸ್. ಶಿವಪ್ರಕಾಶ್
ಪು: 728
ಬೆ: ₹ 800
ಪ್ರ: ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ (ರಿ.)
ನಂ. 15, 2ನೇ ಅಡ್ಡರಸ್ತೆ,
ನಿಸರ್ಗ ಬಡಾವಣೆ,
ಉಲ್ಲಾಳ ಆರ್‌ಟಿಓ ಹತ್ತಿರ,
ಬೆಂಗಳೂರು – 560 091

ಇವರನ್ನು ಗಮನಿಸುತ್ತಾ, ಓದುತ್ತಾ, ಇವರ ಕಾವ್ಯದ ಜೊತೆ ಎಲ್ಲ ಅಪ್ಪಟ ಕಾವ್ಯದ ಜೊತೆ ಕಟ್ಟಿಕೊಳ್ಳುವ ಅನುರಾಗದ ಸಂಬಂಧವನ್ನು ಕಟ್ಟಿಕೊಂಡಿದೆ. ಕನ್ನಡ ಕಾವ್ಯವನ್ನು ಕುರಿತ ಯಾವ ಚರ್ಚೆಯೂ ಶಿವಪ್ರಕಾಶರನ್ನು ಹಾದು ಹೋಗಿಯೇ ಹೋಗುತ್ತದೆ. ಇಷ್ಟಾಗಿ ಇವರ ಕಾವ್ಯದ ಸ್ಥಾನನಿರ್ದೇಶನದ ಬಗ್ಗೆ ಇರುವ ಅತೃಪ್ತಿಯ ಮೂಲ ಯಾವುದಿರಬಹುದು? (ಇದಕ್ಕೆ ಶಿವಪ್ರಕಾಶರೇ ಹೊಣೆ ಎಂದು ಅವರ ವಿರೋಧಿಗಳು ಹೇಳುವುದನ್ನು ನಾನು ಕೇಳಿದ್ದೇನೆ!) ಶಿವಪ್ರಕಾಶರು ಒಂದರ್ಥದಲ್ಲಿ ಕನ್ನಡ ಕಾವ್ಯದ 'ಮಂಟೇಸ್ವಾಮಿ'. ಇವರ ದೇಸೀ ಒಲವುಗಳಿಗಾಗಿ ಮಾತ್ರವಲ್ಲ, ಮಂಟೇಸ್ವಾಮಿಯ ಅಂತಃಕರಣ ಮತ್ತು ನಿಷ್ಠುರ ಸಾಮಾಜಿಕ, ಧಾರ್ಮಿಕ ನಿಲುವುಗಳಿಗಾಗಿಯೂ ಇವರನ್ನು ಈ ಅದ್ಭುತ ರೂಪಕದ ಜೊತೆಯಿಟ್ಟು ನೋಡಬೇಕು ಎನ್ನಿಸುತ್ತದೆ.

ಮಹತ್ವದ ಕವಿಯನ್ನು ಕುರಿತ ನಮ್ಮ ಓದನ್ನು ನಿರ್ದೇಶಿಸುವ ಹಲವು ಅಂಶಗಳಲ್ಲಿ ಮುಖ್ಯವಾದವು ಎರಡು. ಅವರ ಕಾವ್ಯದ ಕಾಲಧರ್ಮದ ಓದಿಗೆ ಎಳಸುವುದು ಒಂದಾದರೆ, ಅದರಲ್ಲಿ ಕಾಲಾತೀತ ಸತ್ಯಗಳ ಹುಡುಕಾಟ ಇನ್ನೊಂದು. ಈ ಎರಡನ್ನೂ ಬೇರೆ ಬೇರೆ ಮಾಡಬೇಕಾಗಿಲ್ಲ ನಿಜ, ಆದರೆ ಯಾವುದೋ ಒಂದಕ್ಕೆ ಸಿಗುವ ಒತ್ತು ಅವರ ಕಾವ್ಯದ ಇಡಿ ಓದಿಗೆ ಅಡ್ಡಿಯನ್ನು ಉಂಟು ಮಾಡುತ್ತಿರುತ್ತದೆ. ಈ ಎರಡಲ್ಲದೆ, ಯಾವುದೇ ಸಾಹಿತ್ಯ ಪರಂಪರೆಯ ವಿವಿಧ ತಾತ್ವಿಕ ಘಟ್ಟಗಳ ಜೊತೆ ಇವರನ್ನು ಹೊಂದಿಸುವ ಕಾರ್ಯವೂ ನಡೆಯುತ್ತಲೇ ಇರುತ್ತದೆ. ಬಹುತೇಕ ಸಂದರ್ಭಗಳಲ್ಲಿ ಈ ಪ್ರಯತ್ನಗಳು ಯಶಸ್ವಿಯಾಗಿ ಕವಿಗಳನ್ನು ಯಾವ ಕುರ್ಚಿಯಲ್ಲಿ ಕೂರಿಸಬೇಕೆನ್ನುವ ತೀರ್ಮಾನ ಆಗಿ ಬಿಡುತ್ತದೆ. ಶಿವಪ್ರಕಾಶರ ವಿಷಯದಲ್ಲಿ ಇದು ಅಷ್ಟು ಸರಳವಾಗಿ ಘಟಿಸಲಿಲ್ಲ. ಕನ್ನಡ ಕಾವ್ಯದ ಮೂರು ಮುಖ್ಯ ಘಟ್ಟಗಳಲ್ಲಿಯೂ ಸಕ್ರಿಯವಾಗಿ ಕಾವ್ಯ ರಚನೆ ಮಾಡಿದ ಶಿವಪ್ರಕಾಶರು ಗೆಳೆಯರ ಗುಂಪಿನಲ್ಲಿ ಏಕಾಂಗಿಯಾಗಿಯೇ ಉಳಿದರು. ಅನುಭಾವಿ ಹಾಗೂ ಎಡಪಂಥೀಯ ಧಾರೆಗಳ ವಿರುದ್ಧ ಧ್ರುವಗಳಲ್ಲಿ ಉತ್ಕಟವಾಗಿ ಈಜಿದರೂ ಅವು ಇವರ ಕಾವ್ಯದ ಚೌಕಟ್ಟುಗಳಾಗಲಿಲ್ಲ. ಏಕ ತಾತ್ವಿಕತೆಯನ್ನು ನೆಚ್ಚಿ ಬರೆಯುವುದು ಇವರ ಜಾಯಮಾನದಲ್ಲಿಯೇ ಇಲ್ಲ. ಈ ಅರ್ಥದಲ್ಲಿಯೂ ಇವರದು ವಿಶ್ವಪ್ರಜ್ಞೆ. ಆಲಯಗಳನ್ನು ಎಂದೂ ಒಪ್ಪದ ಬಯಲಪ್ರಜ್ಞೆಯ ಕವಿ ಇವರು.

ಶಿವಪ್ರಕಾಶರ ವಿಶ್ವಪ್ರಜ್ಞೆಯ ಮೂಲವನ್ನು 'ತಾಯಿ ಪ್ರಜ್ಞೆ'ಯಲ್ಲಿ ಗುರುತಿಸಬಹುದು.